ತೆಗಳನ್ನು ಕೊಡುವುದಕ್ಕೆ ಸಿದ್ಧವೆಂದು ಹೇಳುವುದಕ್ಕೆ ನಮ್ಮ ಸರ್ಕಾರದವರು ತಯಾರಾಗಿದ್ದಾರೆಯೆ?

Sri T. SIDDALINGAIYA.—But so far as I know, there is no such proposal of the Government of India to take up a fertiliser project in Bhadravathi.

ಶ್ರೀ ಜಿ. ಎ. ತಿಮ್ಮಪ್ಪಗೌಡರು (ಅರಕಲಗೂಡು).—ನಮ್ಮ ಸರ್ಕಾರದವರು ಅಲ್ಲಿ ಒಂದು ಕೃತಕ ಗೊಬ್ಬರದ ಕಾರ್ಖಾನೆಯನ್ನು ಸ್ಥಾಪಿಸಲು ಇಂಡಿಯ ಸರ್ಕಾರದವರನ್ನು ಹಣ ಸಹಾಯ ಕೇಳಿದ್ದಾರೆಯೆ?

Mr. SPEAKER.—This does not relate to the main question.

Sri T. SIDDALINGAIYA.—Yes, Sir, this does not arise.

Manufacturing Newsprint in Bhadravati Paper Mills.

Q.—270. **Srimathi LAKSHMIDEVI RAMANNA** (Hoskote-Anekal).—

Will the Government be pleased to state:—

(*a*) the number of tons of paper manufactured in Mysore Paper Mills, Bhadravati, annually;

(*b*) the quantity of paper consumed in Mysore State annually;

(*c*) whether it is not possible to manufacture Newsprint side by side along with this white-printing?

A.—**Sri T. SIDDALINGAIYA** (Minister for Industries).—

(*a*) This is a Joint Stock concern and production figures are not available with Government.

(*b*) Information is not available.

(*c*) This cannot be answered by Government.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು.—ಉತ್ಪನ್ನಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳು ಸರ್ಕಾರದಲ್ಲಿ ದೊರೆಯುವುದಿಲ್ಲವೆಂದು ಹೇಳಲಾಗಿದೆ; ಈ ವಿವರಗಳನ್ನು ಸರ್ಕಾರದವರು ಪಡೆಯಲು ಸಾಧ್ಯವಿಲ್ಲವೆ?

Sri T. SIDDALINGAIYA.—It relates to the internal management of the Joint Stock Company; Government need not get information on all such matters.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು.—ಸರ್ಕಾರದವರು ಈ ಸಂಸ್ಥೆಗೆ ಹಣ ಸಹಾಯ ಮಾಡಿದ್ದಾರೆಯೆ?

Sri T. SIDDALINGAIYA.—Government have some shares.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು.—ಹೀಗೆ ಹಣ ಸಹಾಯಮಾಡಿದ ಮೇಲೆ, ಅಲ್ಲಿನ ಉತ್ಪತ್ತಿ, ಲಾಭ, ನಷ್ಟ ಮುಂತಾದ್ದನ್ನು ತಿಳಿದು ಕೊಳ್ಳುವುದು ಸರ್ಕಾರದ ಕರ್ತವ್ಯವಲ್ಲವೆ?

Sri T. SIDDALINGAIYA.—So far as the financial position is concerned, Government will take care to see that their interests do not suffer. Everything else is left to the Board of Management of the Paper Mills.

ಶ್ರೀಮತಿ ಲಕ್ಷ್ಮೀದೇವಿರಾಮಣ್ಣನವರು.—ನ್ಯೂಸ್ ಪ್ರಿಂಟ್ ಕಾಗದಕ್ಕಾಗಿ ನಮ್ಮ ದೇಶದಿಂದ ಹೊರದೇಶಗಳಿಗೆ ಕೋಟ್ಯಾಂತರ ರೂಪಾಯಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

Sri T. SIDDALINGAIYA.—Yes.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು.—ಕಬ್ಬಿನ ಸಿಪ್ಪೆಯಿಂದ ನ್ಯೂಸ್‌ಪ್ರಿಂಟ್ ತಯಾರು ಮಾಡಬಹುದೆಂದು ಹೇಳುವಾಗ ಮೈಸೂರು ಸರ್ಕಾರದವರು ಈ ಉದ್ಯಮವನ್ನು ಕೈಕೊಂಡರೆ ದೇಶದ ಹಣ ದೇಶದಲ್ಲೇ ಉಳಿಯುವುದಿಲ್ಲವೆ?

Mr. SPEAKER.—That question does not arise.

Sri M. V RAMA RAO (Tumkur).—May I know whether it is a fact that this industry is managed by a Government Director?

Sri T. SIDDALINGAIYA.—Yes.

Sri M. V. RAMA RAO.—May I know whether it is not possible to collect the required statistical information from the Director and the Registrar of Joint Stock Companies?

Sri T. SIDDALINGAIYA.—These are reports of the concerns and they will not be part of the Government Secretariat.

Sri M. V. RAMA RAO.—May I know Sir, why the Hon'ble Minister was pleased to say that Government are

(SRI M. V. RAMA RAO).

not aware of what quantities of paper are manufactured in the Mysore Paper Mills ?

Sri T. SIDDALINGAIYA.—There is a board in charge of these matters. Government are interested only in respect of financial connection.

ಶ್ರೀ ಪಿ. ಆರ್. ರಾಮಯ್ಯನವರು (ಬಸವನಗುಡಿ). ಕಾಗದದ ಕೈಗಾರಿಕೆ ನಡೆಸುವುದಕ್ಕೆ ಸರ್ಕಾರದವರು ಅನೇಕ ಸೌಲಭ್ಯಗಳನ್ನೊದಗಿಸುತ್ತಿದ್ದಾರಲ್ಲವೆ ?

Sri T. SIDDALINGAIYA.—Yes, Sir.

ಶ್ರೀ ಪಿ. ಆರ್. ರಾಮಯ್ಯನವರು.—ಯಾವ ಯಾವ ಸೌಲಭ್ಯಗಳನ್ನೊದಗಿಸುತ್ತಿದ್ದಾರೆ ?

Mr. SPEAKER.—That does not arise.

ಶ್ರೀ ಪಿ. ಆರ್. ರಾಮಯ್ಯನವರು.—ಸರ್ಕಾರದವರು ಮೈಸೂರು ಕಾಗದದ ಕಾರ್ಖಾನೆಯಲ್ಲಿ ತಯಾರಾಗತಕ್ಕ ಕಾಗದದಲ್ಲಿ ಇಷ್ಟು ಕಾಗದವನ್ನು ಇಲ್ಲಿಗೆ ಸರಬರಾಯಿ ಮಾಡಬೇಕೆಂದು ಒಂದು ಹತೋಟಿಯನ್ನಿಟ್ಟುಕೊಂಡಿದ್ದಾರಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೀಗೆ ಹತೋಟಿ ಇಟ್ಟುಕೊಂಡಿರುವುದಕ್ಕೆ ನಮಗೆ ಅಧಿಕಾರವಿಲ್ಲ.

ಶ್ರೀ ಪಿ. ಆರ್. ರಾಮಯ್ಯನವರು.—ಸರ್ಕಾರಕ್ಕೆ ಇಷ್ಟು ಕಾಗದ ತಯಾರುಮಾಡಿ ಸರಬರಾಯಿ ಮಾಡಬೇಕೆಂದು ಕಂಟ್ರಾಕ್ಟ್ ಮಾಡಿಕೊಂಡಿಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದು ಸಾಧ್ಯವಿಲ್ಲ.

ಶ್ರೀ ಪಿ. ಆರ್. ರಾಮಯ್ಯನವರು.—ಹಿಂದೆ 1942-43 ನೆಯ ಸಾಲುಗಳಲ್ಲಿ ಕಾಗದದ ಕಾರ್ಖಾನೆಯವರು 'ಎಮರ್ಜೆನ್ಸಿ ನ್ಯೂಸ್ ಪ್ರಿಂಟ್' ತಯಾರುಮಾಡುತ್ತಿದ್ದುದು ಸರ್ಕಾರದವರಿಗೆ ಗೊತ್ತಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಯು. ಎಂ. ಮಾದಪ್ಪನವರು (ಚಾಮರಾಜನಗರ).—ಆ ಕಾರ್ಖಾನೆಯಲ್ಲಿ ಉತ್ಪತ್ತಿಯಾಗುವ ಕಾಗದ ಹೇಗೆ ವಿಲೇ ಆಗುತ್ತಿದೆ ಹೇಳಬಲ್ಲಿರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇದಕ್ಕೆ ಸಂಬಂಧವಿಲ್ಲ.

ಶ್ರೀ ಯು. ಎಂ. ಮಾದಪ್ಪನವರು (ಚಾಮರಾಜನಗರ).—ಆ ಕಾರ್ಖಾನೆಯ ಉತ್ಪತ್ತಿಯನ್ನು ತಿಳಿದುಕೊಳ್ಳಬೇಕಾದರೆ, ಅದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ತಿಳಿದುಕೊಳ್ಳುವುದು ಒಳ್ಳೆಯದಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಕೈಗಾರಿಗೆ ಇಲಾಖೆಯವರು ಮಾಡುತ್ತಾರೆ.

ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).—'Information is not available' ಎಂದು ಉತ್ತರಕೊಟ್ಟಿದೆ ; ಹೀಗಾದರೆ ಮೈಸೂರು ಸಂಸ್ಥಾನದಲ್ಲಿ ಜಾಯಿಂಟ್ ಸ್ಟಾಕ್ ಕಂಪೆನಿಗಳು ಉಳಿಯುತ್ತವೆಯೆ ?

Mr. SPEAKER.—The Hon'ble Minister need not answer.

ಶ್ರೀ ಎಂ. ಶಂಕರಲಿಂಗೇಗೌಡರು.—ಹಾಗಾದರೆ, ಜಾಯಿಂಟ್ ಸ್ಟಾಕ್ ಕಂಪೆನಿಗಳ ವಿಚಾರವಾಗಿ ಯಾವ ಸಮಾಚಾರ ತಿಳಿಸುವುದಕ್ಕೂ ಸರ್ಕಾರಕ್ಕೆ ಅಧಿಕಾರವಿಲ್ಲವೆ ?

Mr. SPEAKER.—The Hon'ble Member may put a specific question. This is too general and vague.

Sri M. SHANKARLINGE GOWDA.—Is not any information available concerning joint stock concerns ?

Mr. SPEAKER.—The Hon'ble Minister need not answer.

ಶ್ರೀ ಎಸ್. ಗೋಪಾಲಗೌಡರು (ಸಾಗರ—ಹೊಸನಗರ).—ಸರ್ಕಾರ ಷೇರುಗಳನ್ನು ಕೊಂಡಿದ್ದು ಇಂತಹ ಜಾಯಿಂಟ್ ಸ್ಟಾಕ್ ಕಂಪೆನಿಗಳಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ, ಅದು ಯಾವ ರೀತಿಯಲ್ಲಿ ಖರ್ಚಾಗುತ್ತದೆ ಎಂಬುದು ಗೊತ್ತಿಲ್ಲವೆಂದು ಉತ್ತರಕೊಡುವುದರಿಂದ, ನಮ್ಮ ಸರ್ಕಾರದ ಹಣ ಇದರಿಂದ ನಷ್ಟವಾಗುತ್ತಿದೆಯೆಂದು ಭಾವಿಸಬಹುದಲ್ಲವೆ ?

ಅಧ್ಯಕ್ಷರು.—ಒಂದೇ ಪ್ರಶ್ನೆಯಲ್ಲಿ ಅನೇಕ ಪ್ರಶ್ನೆಗಳನ್ನು ಸೇರಿಸಿ ಕೇಳುತ್ತಿದ್ದೀರಿ. ಇದಕ್ಕೆ

ಉತ್ತರಕೊಡುವುದು ಅನಾವಶ್ಯಕ. ಅಲ್ಲದೆ ಅದು ಸರ್ಕಾರಿ ಕಾರ್ಖಾನೆಯಲ್ಲ.

ಶ್ರೀ ಎಸ್. ಗೋಪಾಲಗೌಡರು.—ಆ ಕಾರ್ಖಾನೆಯಲ್ಲಿ ಸರ್ಕಾರದ ಷೇರು ಹಣವಿದೆ. ಹೀಗೆ ಸರ್ಕಾರ ಷೇರುಗಳನ್ನು ಹಾಕಿರುವುದರಿಂದ, ಅಲ್ಲಿ ಏನು ಉತ್ಪತ್ತಿಯಾಗುತ್ತದೆ ಎಂಬುದನ್ನು ತಿಳಿಯಬೇಡವೆ?

Mr SPEAKER.—It is a matter of opinion. This is not the time to discuss the matter.

ಶ್ರೀ ಡಿ. ದೇವರಾಜ ಅರಸಿನವರು (ಹುಣಸೂರು).—ಸರ್ಕಾರದವರ ಷೇರುಗಳೂ ಅದರಲ್ಲಿರುವುದರಿಂದ, ಆ ವಿವರಗಳನ್ನು ತರಿಸಿಕೊಳ್ಳುವುದಕ್ಕೆ ಆಗುವುದಿಲ್ಲವೇ?

Sri T. SIDDALINGAIYA.—Government look to the financial soundness of the concern, not to the internal management of the concern.

Sri D. DEVARAJA URS.—Does not the financial soundness of a Joint Stock Company depend upon production and other matters?

Sri T. SIDDALINGAIYA.—It does.

Sri D. DEVARAJA URS.—Then cannot the Government look to the other positions of the Joint Stock Company—its production and all that?

Sri T. SIDDALINGAIYA.—As I have already said, except for the safety and soundness of the Company, Government need not interfere.

Starting another Medical College.

Q.—42. Sri G. NARAYANA GOWDA (Mulbagal—Srinivaspur).—

Will the Government be pleased to state :—

whether they intend starting another Medical College in the State?

A.—Sri A. G. RAMACHANDRA RAO (Minister for Law and Education).—

Not at present.

ಶ್ರೀ ಜಿ. ನಾರಾಯಣಗೌಡರು —ಹಾಗಾದರೆ ಇನ್ನಾವಾಗ ಮಾಡುತ್ತೀರಿ? ನಮಗೆ ಆ ಬಗ್ಗೆ ಕೊರತೆಯಿಲ್ಲವೇ?

Sri A. G. RAMACHANDRA RAO.—The question is speculative.

ಶ್ರೀ ಜಿ. ನಾರಾಯಣಗೌಡರು.—ಬೇರೊಂದು ಮೆಡಿಕಲ್ ಕಾಲೇಜನ್ನು ದೇಶದಲ್ಲಿ ತೆರೆಯತಕ್ಕ ಆವಶ್ಯಕತೆಯೇನಾದರೂ ಇದೆಯೇ?

Sri A. G. RAMACHANDRA RAO.—It is under consideration.

ಶ್ರೀ ಜಿ. ನಾರಾಯಣಗೌಡರು.—ಹಾಗೆ ಅವಶ್ಯಕತೆ ಇಲ್ಲದಿದ್ದರೂ ಅನೇಕ ಪ್ರಯತ್ನಗಳು ಈ ಹಿಂದೆ ನಡೆಯಲಿಲ್ಲವೇ?

Sri A. G. RAMACHANDRA RAO.—Possibly.

ಶ್ರೀ ಜಿ. ನಾರಾಯಣಗೌಡರು.—ಹಾಗೆ ಏನೇನು ಪ್ರಯತ್ನಗಳು ನಡೆಸಲಾಗಿರುತ್ತೆ ಎಂಬುದನ್ನು ತಿಳಿಸುವಿರಾ?

Sri A. G. RAMACHANDRA RAO.—Notice.

ಶ್ರೀ ಜಿ. ಎ. ತಿಮ್ಮಪ್ಪಗೌಡರು (ಅರಕಲಗೂಡು).—ಇನ್ನೊಂದು ಮೆಡಿಕಲ್ ಕಾಲೇಜನ್ನು ಸ್ಥಾಪನೆಮಾಡತಕ್ಕ ಬಗ್ಗೆ ಮೈಸೂರು ಸರ್ಕಾರಕ್ಕೂ, ಬೊಂಬಾಯಿ ಸರ್ಕಾರಕ್ಕೂ ವಿಶೇಷ ಪತ್ರ ವ್ಯವಹಾರಗಳು ನಡೆಯಲಿಲ್ಲವೆ?

Sri A. G. RAMACHANDRA RAO.—Yes.

ಶ್ರೀ ಜಿ. ಎ. ತಿಮ್ಮಪ್ಪಗೌಡರು.—ಆ ಮಾತುಕತೆಗಳ ಫಲಿತಾಂಶವೇನಾಯಿತು?

Sri A. G. RAMACHANDRA RAO.—They have come forward with a contribution of about Rs. 25 lakhs.

ಶ್ರೀ ಜಿ. ಎ. ತಿಮ್ಮಪ್ಪಗೌಡರು.—ಅದಕ್ಕೆ ನಮ್ಮ ಸರ್ಕಾರದವರ ತೀರ್ಮಾನ ಅಥವಾ ಅಭಿಪ್ರಾಯವೇನೆಂಬುದನ್ನು ತಿಳಿಸುವಿರಾ?

Sri A. G. RAMACHANDRA RAO.—Want of finance is the answer.

Sri R. ANANTARAMAN (Chamarajpet).—Is there a proposal to convert the Medical School into a College?

Sri A. G. RAMACHANDRA RAO.—There is no proposal now.